ಆ) ಈ ಸಮೀಕ್ಷೆಯ ಕಾರ್ಯಕ್ಕಾಗಿ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಇದುವರೆಗೆ 46,49,852 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ.

ಸಮೀಕ್ಷಾ ವರದಿಯ ಆಧಾರದ ಮೇಲೆ ಈಗಿರುವ ಕೆಲವು ಯೋಜನೆಗಳನ್ನು ಮಾರ್ಪಡಿಸುವುದಲ್ಲದೆ ಹೆಚ್ಚಿನ ಅಭಿವೃದ್ಧಿಗೊಸ್ಕರ ಹೊಸ ಯೋಜನೆಗಳನ್ನು ರೂಪಿಸಿ ಕಾರ್ಯಗತಗೊಳಿಸಲು ಉದ್ದೇಶಿಸಲಾಗಿದೆ.

ಇ) ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗಗಳ ಜನರ ಶವ ಸಂಸ್ಕಾರಕ್ಕಾಗಿ 1000-00 ರೂಪಾಯಿಗಳನ್ನು ಮಹಾನಗರಪಾಲಿಕೆ, ಪುರಸಭೆ ಮತ್ತು ನಗರಸಭೆಗಳ ಶೇಕಡ 18ರ ಹಣದಲ್ಲಿ ನೀಡಲು ಸರ್ಕಾರವು ಆದೇಶಿಸಿ, ದಿನಾಂಕ 16-12-95ರಲ್ಲಿ ಸುತ್ತೋಲೆ ಹೊರಡಿಸಿದೆ. ಈ ಸುತ್ತೋಲೆಯನ್ನು ಎಲ್ಲಾ ಜಿಲ್ಲಾಧಿಕಾರಿಗಳು, ಆಯುಕ್ತರು, ಮಹಾನಗರಪಾಲಿಕೆ, ನಗರಸಭೆ, ಪುರಸಭೆಗಳಿಗೆ ಮತ್ತು ಪಂಚಾಯತ್‌ಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ. ಈ ಸರ್ಕಾರದ ಸುತ್ತೋಲೆಯನ್ನು ಇತ್ತೀಚೆಗೆ ಕಳುಹಿಸಿರುವುದರಿಂದ ಈ ಬಗ್ಗೆ ನೀಡಲಾದ ಹಣದ ವಿವರ ಇದುವರೆಗೆ ವರದಿಯಾಗಿರುವುದಿಲ್ಲ.

ಆಶ್ರಯ ಯೋಜನೆಯಲ್ಲಿ ಆದ ಅವ್ಯವಹಾರಗಳಿಗೆ ತನಿಖೆ

539 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಶ್ರಯ ಯೋಜನೆಯಲ್ಲಿ ನಡೆದ ಅವ್ಯವಹಾರಗಳ ಬಗ್ಗೆ ತನಿಕೆ ನಡೆಸಿದ ಸಿ.ಓ.ಡಿ.ಯು ಸರ್ಕಾರಕ್ಕೆ ವರದಿ ಸಲ್ಲಿಸಿದೆಯೇ?

ಆ) ಹಾಗಿದ್ದಲ್ಲಿ, ಆರೋಪಿಗಳ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಸವರಾಜ ರಾಯರೆಡ್ಡಿ (ವಸತಿ ರಾಜ್ಯ ಸಚಿವರು) :

ಅ) ಸಿ.ಓ.ಡಿ. ತಾತ್ಕಾಲಿಕ ವರದಿಯನ್ನು ಸರ್ಕಾರಕ್ಕೆ ದಿನಾಂಕ 28-2-94 ರಂದು ಸಲ್ಲಿಸಿದೆ. ಆದರೆ, ಸಿ.ಓ.ಡಿ. ಯಿಂದ ಇನ್ನೂ ಅಂತಿಮ ವರದಿಯು ಬಂದಿರುವುದಿಲ್ಲ.

ಆ) ಸಂಬಂಧಪಟ್ಟ ಅಧಿಕಾರಿಗಳನ್ನು ಆಶ್ರಯ ಅವ್ಯವಹಾರಗಳಲ್ಲಿ ತೊಡಗಿದ್ದವರನ್ನು ಸೇವೆಯಿಂದ ಅಮಾನತ್ತುಗೊಳಿಸಿ, ಆರೋಪಿಗಳ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲಾಗಿದೆ.

ಕೋಲಾರ ಜಿಲ್ಲೆಯಲ್ಲಿ ವಸತಿ ಹೀನರಿಗೆ ಮನೆ ಮಂಜೂರಾತಿ

541 - ಶ್ರೀ ವಿ. ಮುನಿಯಪ್ಪ (ಶಿಡ್ಲಘಟ್ಟ) : ಮಾನ್ಯ ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆಯಲ್ಲಿ 1995ನೇ ಸಾಲಿನ ಸಮೀಕ್ಷೆ ಪ್ರಕಾರ ನಿವೇಶನ ಮತ್ತು ವಸತಿ ಹೀನರ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರಗಳನ್ನು ನೀಡುವುದು).

ಆ) *ರಾಜ್ಯದಲ್ಲಿ ಜಾರಿಯಲ್ಲಿರುವ ವಿವಿಧ ಯೋಜನೆಗಳಡಿಯಲ್ಲಿ 1995-96ನೇ ಸಾಲಿಗಾಗಿ ಈ ಜಿಲ್ಲೆಗೆ ಮಂಜೂರು ಮಾಡಲಾಗಿರುವ ಮನೆಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರಗಳನ್ನು ನೀಡುವುದು).*

ಇ) *ಸಮೀಕ್ಷೆಗೆ ಅನುಗುಣವಾಗಿ ಎಲ್ಲಾ ವಸತಿ ಹೀನರಿಗೆ ಮನೆಗಳನ್ನು ಒದಗಿಸುವುದರ ಬಗ್ಗೆ ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳಾವುವು?*

ಶ್ರೀ ಬಸವರಾಜ ರಾಯರೆಡ್ಡಿ (ವಸತಿ ರಾಜ್ಯ ಸಚಿವರು) :

ಆ) ಕೋಲಾರ ಜಿಲ್ಲೆಯಲ್ಲಿ 1996ನೇ ಸಾಲಿನ ಸಮೀಕ್ಷೆ ಪ್ರಕಾರ ನಿವೇಶನ ಮತ್ತು ವಸತಿಹೀನರಿಗೆ ತಾಲ್ಲೂಕುವಾರು ವಿವರ ಕೆಳಕಂಡಂತಿದೆ:

ಕ್ರ.ಸಂ.	ತಾಲ್ಲೂಕು	ನಿವೇಶನ ರಹಿತರು	ವಸತಿ ಹೀನರು
1)	ಕೋಲಾರ	4029	6459
2)	ಮುಳಬಾಗಿಲು	991	5724
3)	ಶ್ರೀನಿವಾಸಪುರ	1673	6250
4)	ಬಂಗಾರುಪೇಟೆ	3145	5243
5)	ಮಾಲೂರು	954	3172
6)	ಚಿಂತಾಮಣಿ	4314	4980
7)	ಶಿಡ್ಲಘಟ್ಟ	2943	3791
8)	ಚಿಕ್ಕಬಳ್ಳಾಪುರ	4841	5368
9)	ಗೌರಿಬಿದನೂರು	5741	15048
10)	ಬಾಗೇಪಲ್ಲಿ	3030	7300
11)	ಗುಡಿಬಂಡೆ	1390	1111
	ಒಟ್ಟು	**33051**	**64446**

ಆ) ಕೋಲಾರ ಜಿಲ್ಲೆಗೆ ಆಶ್ರಯ, ಅಂಬೇಡ್ಕರ್ ಹಾಗೂ ಇಂದಿರಾ ಆವಾಸ್ ಯೋಜನೆಗಳಡಿಯಲ್ಲಿ 1995-96 ನೇ ಸಾಲಿಗೆ ಹಂಚಿಕೆ ಮಾಡಲಾದ ಮನೆಗಳ ವಿವರಗಳು

ಕ್ರ ಸಂ.	ತಾಲ್ಲೂಕು	ಆಶ್ರಯ	ಡಾ। ಅಂಬೇಡ್ಕರ್	ಇಂದಿರಾ ಆವಾಸ್
1)	ಕೋಲಾರ	397	156	406
2)	ಮಾಲೂರ್	294	128	335
3)	ಮುಳಬಾಗಿಲು	332	138	367
4)	ಬಂಗಾರಪೇಟೆ	314	167	420
5)	ಶ್ರೀನಿವಾಸಪುರ	1013	142	370
6)	ಚಿಕ್ಕಬಳ್ಳಾಪುರ	241	115	300
7)	ಚಿಂತಾಮಣಿ	359	166	435
8)	ಗೌರಿಬಿದನೂರು	42	209	545
9)	ಗುಡಿಬಂಡೆ	89	37	100
10)	ಬಾಗೇಪಲ್ಲಿ	281	104	275
11)	ಶಿಡ್ಲಘಟ್ಟ	26	108	280
	ಒಟ್ಟು	**110**	**1470**	**3826**

ಇ) 1) ಆಶ್ರಯ ಯೋಜನೆ

2) ಡಾ॥ ಅಂಬೇಡ್ಕರ ಯೋಜನೆ

3) ಇಂದಿರಾ ಆವಾಸ್ ಯೋಜನೆ.

ತಿಪಟೂರಿನಲ್ಲಿ ಕುಡಿಯುವ ನೀರಿನ ಸಮಸ್ಯೆ ನಿವಾರಣೆ

542 - ಶ್ರೀ ಬಿ. ನಂಜಾಮರಿ (ತಿಪಟೂರು) : ಮಾನ್ಯ ನಗರಾಭಿವೃದ್ಧಿ, ಕಾಡಾ ಮತ್ತು ಹೆಚ್ ಕೆಡಿಬಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ತಿಪಟೂರಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗೂ ಪುರಸಭೆಯ ವ್ಯಾಪ್ತಿಯಲ್ಲಿ ಪ್ರತಿ 13,14 ದಿನಕ್ಕೊಮ್ಮೆ ನೀರು ಬಿಡುತ್ತಿದ್ದು ಇದು 50 ರಿಂದ 60 ಸಾವಿರದಷ್ಟಿರುವ ಜನಸಂಖ್ಯೆಯುಳ್ಳ ತಿಪಟೂರಿಗೆ ಈ ಕ್ರಮ ಸರಿಯೇ ಇದಕ್ಕೆ ಸರ್ಕಾರದ ಕ್ರಮವೇನು!*

ಆ) *400 ರಿಂದ 600 ಅಡಿಯವರೆಗೆ ಭೂಮಿಯನ್ನು ಬೊರವೆಲಗಾಗಿ ಕೊರೆದರೂ ನೀರು ಬರುತ್ತಿಲ್ಲವೆಂಬುದು ನಿಜವೇ, ಈಗಿರುವ ಬೊರೆವೆಲಗಳೆಲ್ಲಾ ಬತ್ತಿ ಹೋಗಿರುವುದು ನಿಜವೇ; ಈ ಬಗ್ಗೆ ಸರ್ಕಾರದ ಕೈಗೊಳ್ಳಲಾಗುವ ಕ್ರಮವೇನು?*

9521-47